ಶ್ರೀ ಜಿ. ಎಂ. ಕಾನಡೆ.—ಅಧ್ಯಕ್ಷರೇ, ವರ್ಗಾವಣೆ ಮಾಡಿದ ನಂತರ ಶಿಕ್ಷಕರು ಆಯಾಯಂ ಶಾಲೆಗಳಿಗೆ ಹಾಜರಾಗಿದ್ದಾರೋ ಅಥವಾ ಇಲ್ಲವೋ ? ಹಾಜರಾಗದಿದ್ದರೆ ಅಂತಹವರ ಮೇಲೆ ಏನಂ ಕ್ರಮ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ಬಿ. ಸೋಮಶೇಖರ್.—ಅಧ್ಯಕ್ಷರೇ, ಯಾವ ಶಾಲೆಗಳಿಗೆ ನಾವು ವರ್ಗಾವಣೆ ಮಾಡಿದ್ದೇವೆಯೋ ಅಂತಹ ಕಡೆ ರಿಪೋರ್ಟ್ ಮಾಡಿಕೊಳ್ಳದೇ ಇದ್ದರೆ, ಅಂತಹ ಶಿಕ್ಷಕರ ಬಗ್ಗೆ ಡಿಸಿಪ್ಲಿನರಿ ಆಕ್ಷನ್‌ನ್ನು ನಾವು ತೆಗೆದುಕೊಳ್ಳುತ್ತೇವೆ.

## ಗುತ್ತಿಗೆ ಆಧಾರದ ಶಿಕ್ಷಕರನ್ನು ಖಾಯಂ ಮಾಡುವ ಕುರಿತಂ

೬೨೦. ಶ್ರೀ ಬಿ.ಎ. ಉಪ್ಪಿನ (ಕುಂದಗೋಳ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿರುವ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರ ಸಂಖ್ಯೆ ಎಷ್ಟು ?

ಆ) ಎಷ್ಟು ವರ್ಷಗಳಿಂದ ಅವರು ಗುತ್ತಿಗೆ ಸೇವೆ ಸಲ್ಲಿಸುತ್ತಿದ್ದಾರೆ ?

ಇ) ಅವರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಂಶೇಖರ್ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ;

ಆ) ೧) ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ೩,೭೨೬

೨) ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ೩,೫೬೫

೧) ಪ್ರಾಥಮಿಕ ಶಾಲಾ ಶಿಕ್ಷಕರುಗಳು ಎರಡು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

೨) ಪ್ರೌಢ ಶಾಲಾ ಶಿಕ್ಷಕರು ೧೯೮೩-೮೪ ರಿಂದೀಚೆಗೆ ಅಂದರೆ ೪ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇ) ಇದೆ

ಈ) ಪರಿಶೀಲನೆಯಲ್ಲಿದೆ.

ಶ್ರೀ ಬಿ.ಎ. ಉಪ್ಪಿನ.—ಅಧ್ಯಕ್ಷರೇ, ಸಚಿವರ ಉತ್ತರವನ್ನು ನೋಡಿದರೆ ನಿಜಕ್ಕೂ ವಿಚಿತ್ರ ವೆನಿಸುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರು ಎರಡು ವರ್ಷಗಳಿಂದ ಹಾಗೂ ಪ್ರೌಢ ಶಾಲಾ ಶಿಕ್ಷಕರು ೪ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಸುಮಾರು ೮ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೂರಾರು ಶಿಕ್ಷಕರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಇವರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಗಮನದಲ್ಲಿದ್ದು ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆಯೆಂದು ಹೇಳಿದ್ದಾರೆ. ಕಳೆದ ಸಲ ಇದೇ ಪ್ರಶ್ನೆ ಕೇಳಿದಾಗ ಆಗಿನ ವಿದ್ಯಾಮಂತ್ರಿಗಳು ಉತ್ತರಿಸುತ್ತಾ, ಮುಂದಿನ ಮಂತ್ರಿಮಂಡಲದಲ್ಲಿ ವಿಷಯ ಇಟ್ಟು ಇವರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದರು. ಖಾಯಂಗೊಳಿಸುವ ಬಗ್ಗೆ ಪರಿಶೀಲನೆ ಯಾವ ಹಂತದಲ್ಲಿ ಇದೆ ? ಇವರನ್ನು ಖಾಯಂ ಮಾಡುವುದಕ್ಕೆ ಇರುವ ತೊಂದರೆ ಏನು ? ೧೦ ಸಾವಿರ ಸಂಖ್ಯೆಯಲ್ಲಿರುವ ಗುತ್ತಿಗೆ ಶಿಕ್ಷಕರು ಪರ್ಮನೆಂಟರ ಹೂಡುವದ ಪ್ರಯತ್ನ ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಸೋಮಶೇಖರ್.—ಗುತ್ತಿಗೆ ಆಧಾರದ ಮೇಲಿನ ಶಿಕ್ಷಕರನ್ನು ಖಾಯಂ ಮಾಡತಕ್ಕ ತಾತ್ವಿಕ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಹಾಗೂ ಅದಕ್ಕೆ ಅಜ್ಜಿ ಹೊರಡಿಸಬೇಕು. ಈ ಬಗ್ಗೆ ಅಡಕಿತಾತ್ಮಕವಾದ ಪರಿಶೀಲನೆ ನಡೆಯುತ್ತಿದ್ದು, ಅದು ಆದಮೇಲೆ ಕಾರ್ಯಕ್ರಮ ಹಾಕಿಕೊಳ್ಳಲಾಗುತ್ತದೆ.

ಶ್ರೀ ಬಿ ಎ. ಉಪ್ಪಿನ.—ಮಾನ್ಯ ಮಂತ್ರಿಗಳು ಪರಿಶೀಲನೆಯಲ್ಲಿದೆ ಹಾಗೂ ಕ್ರಮ ತೆಗೆದು ಕೊಳ್ಳುತ್ತೇವೆಂದರೆ ಅದನ್ನು ಈಗಲೇ ಏತಕ್ಕೆ ಘೋಷಣೆ ಮಾಡಬಾರದು ? ಶಿಕ್ಷಕರು ತೊಂದರೆಯಲ್ಲಿದ್ದಾರೆ. ಅವರಿಗೆ ಪರಿಷ್ಕೃತ ವೇತನ ಕೊಟ್ಟಿಲ್ಲ. ಅದನ್ನು ಕೊಡುತ್ತಾರೆಯೇ ಹೇಗೆ ಅವರನ್ನು ಖಾಯಂ ಮಾಡತಕ್ಕ ನಿರ್ಧಾರವನ್ನು ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತಾರೆನ್ನುವ ಉತ್ತರವನ್ನು ಮಾನ್ಯ ಸಚಿವರಿಂದ ಖಚಿತವಾಗಿ ಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡತಕ್ಕ ಶಿಕ್ಷಕರನ್ನು ಸ್ಥಳಾಂತರಿಸುವುದಿಲ್ಲ. ಅವರನ್ನು ಖಾಯಂ ಮಾಡತಕ್ಕ ಆಜ್ಞೆ ಹೊರಡಿಸತಕ್ಕ ನಿರ್ಧಾರವನ್ನು ಆದಷ್ಟು ಶೀಘ್ರವಾಗಿ ತೆಗೆದುಕೊಳ್ಳುತ್ತೇವೆ.

## ಕೊಚರಿ ಏತ ನೀರಾವರಿ

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಹಿರಣ್ಯಕೇಶಿ ನದಿಯಿಂದ ಕೊಚರಿ ಯಾತ ನೀರಾವರಿ ಮಾಡುವುದಕ್ಕೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ವಿಷಯ ಏತ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಆ ಕೆಲಸವನ್ನು ಬೇಗ ಮಾಡದಿದ್ದರೆ ಕಷ್ಟವಾಗುತ್ತದೆ. ಅಲ್ಲಿಯ ಜನರ ಪರಿಸ್ಥಿತಿ ಗಂಭೀರವಾಗಿದೆ. ಅದನ್ನು ಯಾವಾಗ ಮಾಡಿ ಸುತ್ತೀರಿ ?

ಶ್ರೀ ಎಚ್.ಡಿ. ದೇವೇಗೌಡ.—ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮಕ್ಕೆ ಈ ಯೋಜನೆಗಳನ್ನು ಕಳುಹಿಸಿಕೊಟ್ಟು ಆ ಕಡೆಯಿಂದ ಕೆಲಸವನ್ನು ತೆಗೆದುಕೊಳ್ಳತಕ್ಕ ಕೆಲವು ತೀರ್ಮಾನಗಳನ್ನು ಪೂರ್ವ ಭಾವಿಯಾಗಿ ತೆಗೆದುಕೊಳ್ಳುತ್ತಿದ್ದೇವೆ. ಈ ಯೋಜನೆಯನ್ನು ಸಹ ಏತ ನೀರಾವರಿ ಕಾರ್ಪೊರೇಷನ್ ಮುಖಾಂತರ ತೆಗೆದುಕೊಳ್ಳತಕ್ಕದ್ದು ನಮ್ಮ ಇಚ್ಛೆಯಿದೆ. ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಆರ್ಥಿಕ ನೆರವನ್ನು ಪಡೆದುಕೊಳ್ಳುವುದಕ್ಕೋಸ್ಕರ, ಈ ಸಂಸ್ಥೆಯನ್ನು ನಿರ್ಮಾಣ ಮಾಡಿದ್ದೇವೆ. ಈ ಯೋಜನೆಯನ್ನು ಆ ನಿಗಮಕ್ಕೆ ವಹಿಸಿ ಕೊಟ್ಟಿದ್ದೇವೆ. ಈ ಯೋಜನೆ ತೆಗೆದುಕೊಳ್ಳುವ ಬಗ್ಗೆ ನಬಾರ್ಡ್ ಮತ್ತು ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಈ ಯೋಜನೆ ಘಟಪ್ರಭ ಯೋಜನೆಯಡಿಯಲ್ಲಿ ಬರುತ್ತದೆ. ಕಳೆದ ಸಾರಿ ಈ ಯೋಜನೆ ಮಂಜೂರಾಗಿದೆ. ಹಣವನ್ನೂ ಸಹ ಬಿಡುಗಡೆ ಮಾಡಿದ್ದಾರೆ. ಅದು ಬಡ್ಜೆಟ್‌ನಲ್ಲಿ ಸಹ ಬಂದಿದೆ. ಇದನ್ನು ಏತ ನೀರಾವರಿ ಕಾರ್ಪೊರೇಷನ್ ಮುಖಾಂತರ ಪರಿಶೀಲನೆ ಮಾಡುತ್ತೇವೆಂದು ಜನರು ನಮ್ಮನ್ನೂ ಪರಿಶೀಲನೆ ಮಾಡುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ.—ಜನರು ಪರಿಶೀಲನೆ ಮಾಡುತ್ತಾರೆಂದರೆ, ಚುನಾವಣೆ ಸಂದರ್ಭದಲ್ಲಿ ನಮ್ಮನ್ನು ನಿಮ್ಮನ್ನು ಪರಿಶೀಲನೆ ಮಾಡುತ್ತಾರೆ. ಬಡ್ಜೆಟ್‌ನಲ್ಲಿ ನಾವು ಇಟ್ಟಿರತಕ್ಕ ಹಣ ಏನಿದೆ ಅದರ ಮೂರು ಪಟ್ಟು ಹಣವನ್ನು ಕೂಡಿಸಲಿಕ್ಕೆ ಅಂದರೆ ಶೇಕಡ ೭೫ ರಷ್ಟು ಹಣವನ್ನು ಹಣಕಾಸಿನ ಸಂಸ್ಥೆಗಳಿಂದ ಪಡೆದುಕೊಳ್ಳಬೇಕು. ಶೇಕಡ ೭೫ ರಷ್ಟು ಹಣವನ್ನು ಸರ್ಕಾರ ಮತ್ತು ರೈತರಿಂದ ಅಳವಡಿಸಿಕೊಂಡು, ಶೇಕಡ ೭೫ ರಷ್ಟು ಹಣವನ್ನು ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ಹಣ ಪಡೆದುಕೊಳ್ಳುವುದಕ್ಕೆ ಏತ ನೀರಾವರಿ ಕಾರ್ಪೊರೇಷನ್ ರಚನೆ ಮಾಡಿದ್ದೇವೆ. ೨ ಕೋಟಿ ರೂಪಾಯಿ ಸೀಡ್‌ಮನಿ ಇಟ್ಟಿದ್ದೇವೆ ಅದನ್ನು ಕೊಡುವುದಕ್ಕೆ ಸರ್ಕಾರ ನಿರ್ಣಯ ಮಾಡಿದೆ. ನಾವು ೨ ಕೋಟಿ ಇಟ್ಟರೆ ಬೇರೆ ಬೇರೆ ಹಣಕಾಸಿನ ಸಂಸ್ಥೆಗಳಿಂದ ೬ ಕೋಟಿ ರೂಪಾಯಿಗಳವರೆಗೂ ಹಣವನ್ನು ಪಡೆದುಕೊಳ್ಳು